**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**11**
ಸಿ.ಡಬ್ಲೂ.**12**

ಸಾಕ್ಷಿದಾರರ ಹೆಸರು : ಸರಸ್ವತಿ ಸಿಂಗೆ

ಗಂಡನ ಹೆಸರು : ಸುನೀಲ

ವಯಸ್ಸು : 23 ವರ್ಷ.

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಮುಂಬೈ

**ಇಂದು ದಿನಾಂಕ 25-09-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ**

**1)** ಮೃತ ಚಾಸಾ-**1** ನನ್ನ ತಾಯಿ. ಆಕೆ ಈಗ್ಗೆ **3-4** ವರ್ಷಗಳ ಹಿಂದೆ ತೀರಿಕೊಂಡಿದ್ದಾಳೆ. ಹೇಗೆ ತೀರಿಕೊಂಡಿದ್ದಾಳೆ ಅಂತಾ ಗೊತ್ತಿಲ್ಲ.

**2)** ಚಾಸಾ-**13** ರಿಂದ **17** ನನಗೆ ಪರಿಚಯ ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ನಾವು ಹಿಂದೂ ಚಲವಾದಿ ಜಾತಿಗೆ ಸೇರಿದ್ದ ಅದು ಎಸ್.ಸಿ. ಪಂಗಡದಲ್ಲಿ ಬರುತ್ತದೆ. ಆರೋಪಿತರು ಸಹ ಎಸ್.ಸಿ. ಜಾತಿಗೆ ಸೇರಿದವರಾಗಿರುತ್ತಾರೆ.

**3)** **6** ನೇ ಆರೋಪಿ ನಾರಾಯಣ ಇತನ ಜಾತಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ಈ ಪ್ರಕಣದಲ್ಲಿ ನನ್ನ ಹೇಳಿಕೆ ಮತ್ತು ಮರು ಹೇಳಿಕೆ ಪಡೆದುಕೊಂಡಿಲ್ಲ. ಆರೋಪಿತರು ನನ್ನ ತಾಯಿಗೆ ಏನೂ ಮಾಡಿಲ್ಲ.

**4)** ಸಾಕ್ಷಿಗೆ ದಿನಾಂಕ: **19-04-2020** ರ ನಾಗಮ್ಮ ಇವರ ಶವ ಸ್ವೀಕೃತಿ ರಶೀದಿ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ನಿ.ಪಿ-29 ಸಾಕ್ಷಿಯ ಸಹಿಯನ್ನು ನಿ.ಪಿ.-29(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ: **19-04-2020** ರ ಮೃತ ನಾಗಮ್ಮ ಇವರ ಮೂರು ದಿನದ ಮಗುವಿನ ಶವ ಸ್ವೀಕೃತಿ ರಶೀದಿ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಗುರುತಿಸಿದ್ದರಿಂದ ಅದನ್ನು ನಿ.ಪಿ-30 ಸಾಕ್ಷಿಯ ಸಹಿಯನ್ನು ನಿ.ಪಿ.-30(ಎ) ಅಂತಾ ಗುರುತಿಸಲಾಯಿತು. ಈ ದಾಖಲೆಗಳ ಮೇಲೆ ಪೋಲಿಸರು ನನ್ನ ಸಹಿಯನ್ನು ಯಾವ ಕಾರಣಕ್ಕೆ ಪಡೆದಿರುತ್ತಾರೆ ಅಂತಾ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರುಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**1)** ನಾನು ನನ್ನ ತಾಯಿ ಮೃತ ನಾಗವ್ವ, ತಂಗಿ ಪ್ರತಿಕ್ಷಾ ಸೇರಿ ದೇವಲಾಪುರ ಗ್ರಾಮದಲ್ಲಿ ವಾಸಿಸುತ್ತಿದ್ದೆವು ಅಂದರೆ ಸರಿ. ನನ್ನ ಮದುವೆ ದಿನಾಂಕ: **01-12-2019** ರಂದು ಜಮಖಂಡಿ ತಾಲೂಕಿ ಕುಲ್ಲೊಳ್ಳಿ ಗ್ರಾಮದ ಸುನಿಲ ಸಿಂಗೆ ಇತನೊಂದಿಗೆ ಆಗಿರುತ್ತದೆ ಅಂದರೆ ಸರಿ. ನನ್ನ ಮದುವೆಯನ್ನು ನನ್ನ ತಾಯಿ ಮತ್ತು ಚಾಸಾ-13 ಮಾಡಿ ಕೊಟ್ಟಿದ್ದರು ಅಂದರೆ ಸರಿ. ನಂತರ ನನ್ನ ಗಂಡ ಮುಂಬೈಗೆ ದುಡಿಯಲು ಹೋಗಿದ್ದ ಅಂದರೆ ಸಾಕ್ಷಿಯು ಆತನ ಜೊತೆ ತಾನೂ ಕೂಡಾ ಹೋಗಿರುತ್ತೇನೆ ಅಂತಾ ಹೇಳುತ್ತಾರೆ.

**2)** ನನ್ನ ತಾಯಿ ನಾಗಮ್ಮ ನನ್ನ ತಂದೆ ಸುಭಾಶ ಅನ್ನುವ ವ್ಯಕ್ತಿಯ

ಜೊತೆ ಆಗಿತ್ತು ಅನ್ನುವುದು ಸರಿ. ನಮ್ಮ ತಂದೆ-ತಾಯಿ ಮತ್ತು ನಾವು ಮಂಗಳೂರಿಗೆ ಹೋಗಿದ್ದೆವು ಅಂದರೆ ಸರಿ. ಅಲ್ಲಿ ನನ್ನ ತಂದೆ ತಾಯಿ ನಡುವೆ ವೈಮನಸ್ಸು ಬಂದು ನನ್ನ ತಂದೆ ನನ್ನ ಅಕ್ಕ ಲಕ್ಷ್ಮಿಯನ್ನು ಕರೆದುಕೊಂಡು ನನ್ನ ತಾಯಿಯನ್ನು ಬಿಟ್ಟು ಹೊಗಿದ್ದರು ಅಂದರೆ ಸರಿ. ನಂತರ ನನ್ನ ತಾಯಿಗೆ **6** ನೇ ಆರೋಪಿ ಜೊತೆ ಸಲುಗೆ ಬೆಳದಿತ್ತು ಅಂದರೆ ಸರಿಯಲ್ಲ. ಆತ ನಮ್ಮನ್ನು ತಂದೆಯಂತೆ ಸಾಕುತ್ತಿದ್ದ ಅಂದರೆ ಸರಿಯಲ್ಲ. ನಂತರ ನಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ನನ್ನ ತಾಯಿ ಮಕ್ಕಳು ದೊಡ್ಡವರಾಗಿದ್ದಾರೆ ಅವರಿಗೆ ಮದುವೆ ಮಾಡಬೇಕು ನಾನು ನನ್ನ ಅಕ್ಕನ ಜೊತೆಗೆ ಇರುತ್ತೇನೆ ಅಂತಾ ಗಲಗಲಿಗೆ ವಾಪಸು ಬಂದಿದ್ದರು ಅಂದರೆ ಸರಿ. ಗಲಗಲಿ ಗ್ರಾಮದಲ್ಲಿ ಇರುವಾಗ ನನ್ನ ತಾಯಿ ಚಾಸಾ-**13** ಇರವ ಜೊತೆ ಸಂಬಂಧ ಬೆಳಸಿದ್ದರು ಅಂದರೆ ಸರಿ. ನನ್ನ ತಾಯಿಯ ಅಕ್ಕ **1** ನೇ ಆರೋಪಿ **2017** ನೇ ಸಾಲಿನಲ್ಲಿ ನನ್ನ ತಾಯಿಯ ಹತ್ತಿರ ಬಂದು ಕುಲ್ಯಾಳದಲ್ಲಿ ಒಂದು ಪ್ಲಾಟ ಇದೆ ಅದನ್ನು ತೆಗೆದುಕೊ ಅಂತಾ ಹೇಳಿದ್ದಳು ಅಂದರೆ ಗೊತ್ತಿಲ್ಲ. ಆ ಪ್ಲಾಟ ತೆಗೆದುಕೊಳ್ಳುವ ಸಂಬಂಧ ನನ್ನ ತಾಯಿ ನನ್ನದೊಡ್ಡಮ್ಮನಿಗೆ ರೂ. **60,000/-**ಗಳನ್ನು ನೀಡಿದ್ದಳು ಅಂದರೆ ಸರಿಯಲ್ಲ. ನಂತರ ಚಾಸಾ-**13** ಪ್ಲಾಟನ್ನು ನೋಡಿ ಇದು ಮುಳಗಡೆ ಪ್ರದೇಶದಲ್ಲಿ ಇರುವುದರಿಂದ ಅದನ್ನು ತೆಗೆದುಕೊಳ್ಳಲು ಆಗುವುದಿಲ್ಲ ಹಣವನ್ನು ವಾಪಸು ಪಡೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಈ ಕಾರಣಕ್ಕಾಗಿ ನನ್ನ ತಾಯಿ **1** ನೇ ಆರೋಪಿ ಹತ್ತಿರ ಹಣವನ್ನು ವಾಪಸು ಕೆಳಿದ್ದಳು ಅಂದರೆ ಸರಿಯಲ್ಲ. ಆಗ **1** ನೇ ಆರೋಪಿ ಹಣವನ್ನು ವಾಪಸು ಕೊಡುವುದಿಲ್ಲ ಬೇಕಾದರೆ ಬೇರೆ ಪ್ಲಾಟ ಕೊಡಿಸುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಮುಂದುವರೆದು ಹಣವನ್ನು ಕೇಳಿ ಕಿರಿಕಿರಿ ಮಾಡಿದರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದಳು ಅಂದರೆ ಸರಿಯಲ್ಲ. ಮುಂದೆ ನನ್ನ ತಾಯಿ ಮತ್ತು ಚಾಸಾ-**13**

ಇವರಿಗೆ ಹಣವನ್ನು ವಾಪಸ್ಸು ಕೊಡು ಅಂತಾ ಗಲಗಲಿಗೆ ಹೋಗಿ ಕೇಳಿದಾಗ ಹಣವನ್ನು ವಾಪಸ್ಸು ಕೊಡುವುದಿಲ್ಲ ನೀನು ಏನೂ ಮಾಡಿಕೋತಿ ಮಾಡಿಕೋ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಆಗ ನನ್ನ ತಾಯಿ ಪೋಲಿಸ ಠಾಣೆಯಲ್ಲಿ ಫಿರ್ಯಾದು ನೀಡುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ ಆಗ **1** ನೇ ಆರೋಪಿ ನೀನು ಬದುಕಿದ್ದರೆ ಫಿರ್ಯಾದು ಕೊಡುತ್ತಿಯಾ ಅಷ್ಟರೊಳಗೆ ನಿನ್ನನ್ನು ಖಲಾಸ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದ್ದಳು ಅನ್ನುವ ವಿಷಯ ನನ್ನ ತಾಯಿಯಿಂದ ಗೊತ್ತಾಗಿತ್ತು ಅಂದರೆ ಸರಿಯಲ್ಲ.

**3)** ದಿನಾಂಕ**: 30-12-2019** ರಂದು ನನ್ನ ತಂಗಿಯ ಹುಟ್ಟು ಹಬ್ಬ ಇದ್ದ ಕಾರಣ ಚಾಸಾ-**13** ಕೇಕು ಮತ್ತು ಬಟ್ಟೆ ತರಲು ಮಮದಾಪೂರಕ್ಕೆ ಹೋಗಿದ್ದರು ಅಂದರೆ ನನಗೆ ಗೊತ್ತಿಲ್ಲ. ಮುಂದೆ ನಾನು ಚೂಡಾ ಮಾಡಬೇಕು ಅಂತಾ ಮನೆಯ ಮುಂದೆ ರೋಡಿನ ಆಚಿಗೆ ಇರುವ ದುರ್ಗವ್ವನ ಗುಡಿಯ ಹಿಂದೆ ಇರುವ ಯಮನವ್ವ ಪಾಂಡಪ್ಪ ದೊಡ್ಡಮನಿ ಇವರ ಮನೆಗ ಚೂಡಾ ಮಾಡಲು ಬುಟ್ಟಿ ತರಲು ಹೋಗಿದ್ದೆ ಅಂದರೆ ಸರಿಯಲ್ಲ. ನಾನು ಬರುವಾಗ ನಮ್ಮ ಮನೆಯಲ್ಲಿ ಕಿರಿಚಾಡುವ ಶಬ್ದ ಕೇಳಿತ್ತು ಅಂದರೆ ಸರಿಯಲ್ಲ. ಅಲ್ಲಿ ಹೋಗಿ ನೋಡಲಾಗಿ ಚಾಸಾ-**13,** ನನ್ನ ತಂಗಿ ಮತ್ತು ಅಕ್ಕಪಕ್ಕದ ಮನೆಯವರು ಬಂದಿದ್ದರು ಅಂದರೆ ಸರಿಯಲ್ಲ. ನಮ್ಮನ್ನು ನೋಡಿ **1** ರಿಂದ **5** ನೇ ಆರೋಪಿತರು ಓಡಿ ಹೋದರು ಅಂದರೆ ಸರಿಯಲ್ಲ. ಒಳಗಿನಂದ ನನ್ನ ತಾಯಿ ಮತ್ತು **6** ನೇ ಆರೋಪಿ ಬೆಂಕಿ ಹತ್ತಿಕೊಂಡು ಚೀರಾಡುತ್ತಾ ಹೊರಗಡೆ ಬಂದಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿಗೆ ಬೆಂಕಿ ಹತ್ತಿದ್ದರಿಂದ ಮೈಮೇಲೆ ಇದ್ದ ಸೀರೆ, ಜಂಪರ, ಫರಕಾರ ಸುಟ್ಟಿ ಹೋಗಿತ್ತು ಅಂದರೆ ಸರಿಯಲ್ಲ. ಮುಂದೆ ನಾನು, ಚಾಸಾ-**13** ಎಲ್ಲರೂ ಸೇರಿ ತಾಯಿಯನ್ನು ದುರ್ಗವ್ವನ ಗುಡಿಯ ಮುಂದೆ ಹೋಗಿದ್ದೆವು ಅಂದರೆ

ಸರಿಯಲ್ಲ. 6ನೇ ಆರೋಪಿತ ಕಾಲಿಗೆ ಸ್ವಲ್ಪ ಬೆಂಕಿ ಹತ್ತಿತ್ತು ಆತ ಓಡಿ ಹೋದ ಅಂದರೆ ಸರಿಯಲ್ಲ. ನನ್ನ ತಾಯಿಗೆ ಎದೆಯಿಂದ ಕೆಳಗೆ, ಕೈಗೆ, ಕಾಲಿಗೆ ಸುಟ್ಟ ಗಾಯಗಳನ್ನು ಆಗಿದ್ದರು ಅವಳನ್ನು 108 ಅಂಬ್ಯುಲನ್ಸನಲ್ಲಿ ವಿಜಯಪುರದ ವೇದಾಂತ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದವು ಅಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ತಾಯಿ ಜೊತೆ ಆರೈಕೆ ಮಾಡಲು ನಾನೇ ಇದ್ದೆ ಅಂದರೆ ಸರಿಯಲ್ಲ. ನನ್ನ ತಾಯಿ ನಾನು ಕೇಳಿದಾಗ ಹಾಸ್ಪಿಟಲನಲ್ಲಿ, ನಾನು ಚೂಡಾ ಮಾಡಲು ಹೋದಾಗ 1 ರಿಂದ 6ನೇ ಆರೋಪಿ ಒಮ್ಮೆಲೆ ಮನೆಗೆ ಬಂದರು ಬಂದು 6ನೇ ಆರೋಪಿ ನೀನು ನನ್ನ ಜೊತೆ ಬಾ ಅಂತಾ ಕರೆದಿದ್ದ ಆಗ 1 ಮತ್ತು 2ನೇ ಆರೋಪಿತರು ನೀನು ಆರೋಪಿ ನಂ. 6ರ ಜೊತೆ ಹೋಗು ಚಾಸಾ-13 ಇವರನ್ನು ಬಿಟ್ಟು ಬಿಡು ನೀನು ಪ್ಲಾಟಿಗೆ ಕೊಟ್ಟ ದೊಡ್ಡನ್ನು ವಾಪಸ್ಸು ಕೊಡುತ್ತೇವೆ ಅಂದರು ಆಗ ನನ್ನ ತಾಯಿ ನಾನು ಚಾಸಾ-13 ಇವರನ್ನು ಬಿಟ್ಟು ಬರುವುದಿಲ್ಲ ನೀವು ದುಡ್ಡು ಕೊಡದಿದ್ದರೇ ಚಾಸಾ-13 ರಿಂದ ಹೊಡಿಸುತ್ತೇನೆ ಅಂತಾ ಹೇಳಿದ್ದಳು ಆಗ ಅವರ ನಡುವೆ ಬಾಯಿ ಬಾಯಿ ನಡೆದಿತ್ತು ಆಗ 1 ಮತ್ತು 2ನೇ ಆರೋಪಿ ಈಕೆ ನಮ್ಮ ಮಾತು ಕೇಳುವುದಿಲ್ಲ ಹಾದರ ಮಾಡುವುದು ಬಿಡುವುದಿಲ್ಲ ಇಕೆಯನ್ನು ಖಲಾಸ ಮಾಡಿ ಬೀಡೋಣ ಮುಂದೆ ಯಾರು ದುಡ್ಡು ಕೇಳುವುದಿಲ್ಲ ಅಂತಾ ಹೇಳಿದಾಗ ಆಗ 3 ರಿಂದ 5ನೇ ಆರೋಪಿತರು ನನ್ನ ತಾಯಿಯನ್ನು ಗಟ್ಟಿಯಾಗಿ ಹಿಡಿದಿದ್ದರು ಮತ್ತು 1 ಮತ್ತು 2ನೇ ಆರೋಪಿತರು ತಲಾ 2 ಲಿಟರ್ ಬಾಟಲಿಯಲ್ಲಿ ಇದ್ದ 4 ಲಿಟರ್ ಪೆಟ್ರೋಲನ್ನು ತನ್ನ ಮೇಲೆ ಸುರಿದಿದ್ದರು ನಂತರ ಅವರು 6ನೇ ಆರೋಪಿತನಿಗೆ ನಿನ್ನ ಜೊತೆ ಬಂದರೆ ಇವಳನ್ನು ಕರೆದುಕೊಂಡು ಬಾ ಇಲ್ಲದಿದ್ದರೆ ಬೆಂಕಿ ಹಚ್ಚಿಸುಟ್ಟು ಬಿಡು ಅಂತಾ ಹೇಳಿ ಮನೆ ಹೊರಗೆಡೆ ನಿಂತಿದ್ದರು, ನಂತರ 6ನೇ ಆರೋಪಿ ಕೊನೆಯ ಸಲು ಕೇಳುತ್ತೇನೆ ನೀನು ನನ್ನ ಜೊತೆ ಬಂದು ಬಿಡು ಅಂತಾ ಹೇಳಿದಾಗ ನನ್ನ

ತಾಯಿ ಬರುವುದಿಲ್ಲ ಅಂತಾ ಹೇಳಿದ್ದಕ್ಕೆ ಆತ ಸಿಟ್ಟು ಮಾಡಿಕೊಂಡು ತನ್ನ ಹತ್ತಿರ ಇದ್ದ ಬೆಂಕಿ ಪೊಟ್ಟಣದಿಂದ ಕಡ್ಡಿ ಗೀರಿ ಬೆಂಕಿ ಹಚ್ಚಿದ್ದ ಅದು ಆತನಿಗೂ ಕೂಡಾ ಹತ್ತಿತ್ತು. ನಾವು ಚೀರಾಡುತ್ತಾ ಹೊರಗಡೆ ಬಂದೆವು ನೀವು ಬಂದು ನಮ್ಮ ಪ್ರಾಣ ಉಳಿಸಿದ್ದಿರಿ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಪುನ: ಮುಂದೆವರೆದು ಚಾಸಾ-13 ವಿಷಯ ತಿಳಿದರೆ ನಮ್ಮನ್ನು ಬಿಟ್ಟು ಹೋಗುತ್ತಾನೆ ಅಂತಾ ನಾನು ಮಂಗಳೂರಿನಲ್ಲಿ 6 ನೇ ಆರೋಪಿತರ ಜೊತೆ ಸಂಸಾರ ಮಾಡಿದ ವಿಷಯವನ್ನು ಫಿರ್ಯಾದಿನಲ್ಲಿ ಬರೆಯಿಸಿರುವುದಿಲ್ಲ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಈ ಕುರಿತಂತೆ ಈಗ ಓದಿ ಹೇಳಿದಂತೆ " ನಾನು ದೆವಲಾಪೂರ ಗ್ರಾಮ_ _ _ _ _ _ ಫಿರ್ಯಾದಿ ಕೊಟ್ಟಿರುತ್ತಾಳೆ". ಅಂತಾ ದಿನಾಂಕ: **11-01-2020** ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.-31 ಅಂತಾ ಗುರುತಿಸಲಾಯಿತು.

**4)** ಮುಂದೆ ನನ್ನ ತಾಯಿಯನ್ನು ಹೆಚ್ಚಿನ ಉಪಚಾರಕ್ಕಾಗಿ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಿದ್ದೆವು ಅಂದರೆ ಸರಿಯಲ್ಲ. ಅಲ್ಲಿ ನನ್ನ ತಾಯಿ ದಿನಾಂಕ: **15-04-2020** ರಂದು ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದರು ಅಂದರೆ ಸರಿಯಲ್ಲ. ದಿನಾಂಕ: **18-04-2020** ರಂದು ರಾತ್ರಿ **10-30** ಗಂಟೆಗೆ ಆ ಮಗು ಮರಣಹೊಂದಿತ್ತು ಅಂದರೆ ಸರಿಯಲ್ಲ. ನಂತರ ಅದೇ ದಿವಸ **6-45** ಗಂಟೆಗೆ ನನ್ನ ತಾಯಿ ಸಹ ತೀರಿಕೊಂಡಿರುತ್ತಾಳೆ ಅಂದರೆ ಸರಿಯಲ್ಲ. ನಾನು ನನ್ನ ತಾಯಿ ಮತ್ತು ಮಗುವಿನ ಪಂಚನಾಮ ಕಾಲಕ್ಕೆ ಹಾಜರ ಇದ್ದು ಶವ ಮತ್ತು ಶವದ ಮೈಮೇಲಿನ ವಸ್ತುಗಳನ್ನು ಪೋಲಿಸರು ನನ್ನ ಹಸ್ತದಿಂದ ಕೊಟ್ಟಿದ್ದನ್ನು ಸ್ವೀಕರಿಸಿ ದಿನಾಂಕ: **19-04-2020** ರಂದು ಈಗ ಓದಿ ಹೇಳಿದಂತೆ " ದಿನಾಂಕ: **31-12-2020**_ _ _ _ _ ಸರಿಯಾಗಿ ಇರುತ್ತವೆ." ಅಂತಾ ಮರು

ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಮರು ಹೇಳಿಕೆ ಭಾಗವನ್ನು ನಿ.ಪಿ.-32 ಅಂತಾ ಗುರುತಿಸಲಾಯಿತು.

5) ಅದೇ ಕಾಲಕ್ಕೆ ಪೋಲಿಸರು ನನ್ನಿಂದ ನಿ.ಪಿ.-29,30 ರ ಮೇಲೆ ಸಹಿ ಪಡೆದಿರುತ್ತಾರೆ ಅನ್ನುವುದು ಸರಿಯಲ್ಲ. ಪೋಲಿಸರು ಘಟನಾ ಸ್ಥಳದಿಂದ ಎರಡು 2 ಲೀಟರನ ಪ್ಲಾಸ್ಟಿಕ ಬಾಟಲಗಳು ಹಾಗೂ ಒಂದು ಬೆಂಕಿ ಪೊಟ್ಟಣ, ಒಂದು ಬಿಳಿ ಗುಲಾಬಿ ಬಣ್ಣದ ಸುಟ್ಟ ಸೀರೆ, ತಿಳಿ ಕೇಸರಿ ಬಣ್ಣದ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷ ನೋಡಿ ಎಲ್ಲ ವಿಷಯ ತಿಳಿದ್ದರು ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**25/09/2023**

**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**12**
ಸಿ.ಡಬ್ಲೂ.**14**

ಸಾಕ್ಷಿದಾರರ ಹೆಸರು : ಲಕ್ಷ್ಮಿಬಾಯಿ ದೊಡ್ಡಮನಿ

ಗಂಡನ ಹೆಸರು : ಶಂಕ್ರೆಪ್ಪ

ವಯಸ್ಸು : 30 ವರ್ಷ.

ಉದ್ಯೋಗ : ಕೂಲಿ

ವಾಸಸ್ಥಳ : ದೇವಲಾಪುರ

ಇಂದು ದಿನಾಂಕ **25-09-2023** ರಂದು ಸಾಕ್ಷಿಗೆ ಪ್ರಮಾಣವಚನ
ಬೋಧಿಸಲಾಯಿತು

ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ

**1)** ನನೆ ಚಾಸಾ-**1** ಮತ್ತು ಆರೋಪಿತರ ಪರಿಚಯ ಇಲ್ಲ. ದೇವಲಾಪೂರದಲ್ಲಿ ನನ್ನ ಮನೆ ದುರ್ಗಾದೇವಿ ದೇವಸ್ಥಾನದ ಮುಂದೆ ಇದೆ. ಚಾಸಾ-**1** ಇವರ ಮನೆ ನನ್ನ ಮನೆಯಿಂದ ದೂರ ಇರುತ್ತದೆ. ಈ ಪ್ರಕರಣದ ವಿಷಯ ತಿಳಿದಿಲ್ಲ. ನಾನು ಯಾವುದೇ ಘಟನೆ ನೋಡಿಲ್ಲ. ಚಾಸಾ-**1** ಈಗ ಬದುಕಿಲ್ಲ. ಆಕೆ ಹೇಗೆ ತೀರಿಕೊಂಡಿದ್ದಾಳೆ ಅಂತಾ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಮತ್ತು ನಾಲ್ಕು ಮರು ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರುಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ

**1)** ಮೃತ ನಾಗವ್ವ, ಪ್ರತಿಕ್ಷಾ, ಸರಸ್ವತಿ ಆಕೆಯ ಗಂಡ ಸೇರಿ ದೇವಲಾಪುರ ಗ್ರಾಮದಲ್ಲಿ ನಮ್ಮ ಮನೆಯ ಪಕ್ಕ ವಾಸಿಸುತ್ತಿದ್ದರು ಅಂದರೆ ಸರಿಯಲ್ಲ.

**2)** ನಾಗಮ್ಮ ಸುಭಾಶ ಅನ್ನುವು ವ್ಯಕ್ತಿಯ ಜೊತೆ ಆಗಿತ್ತು ಅನ್ನುವುದು ಗೊತ್ತಿಲ್ಲ. ಅವರು ಮಂಗಳೂರಿಗೆ ಹೋಗಿದದರು ಅಂದರೆ ಗೊತ್ತಿಲ್ಲ. ಅಲ್ಲಿ ಅವರಿಬ್ಬರ ನಡುವೆ ವೈಮನಸ್ಸು ಬಂದು ಅವಳ ಗಂಡ ಮೊದಲನೇ ಮಗಳು ಲಕ್ಷ್ಮಿಯನ್ನು ಕರೆದುಕೊಂಡು ಆಕೆಯನ್ನು ಬಿಟ್ಟು ಹೊಗಿದ್ದ ಅಂದರೆ ಸರಿಯಲ್ಲ. ನಂತರ ಆಕೆಗೆ **6** ನೇ ಆರೋಪಿ ಜೊತೆ ಸಲುಗೆ ಬೆಳದಿತ್ತು ಅಂದರೆ ಸರಿಯಲ್ಲ. ಮೃತ ನಾಗವ್ವಳಿಗೆ **1** ನೇ ಆರೋಪಿ **2017** ನೇ ಸಾಲಿನಲ್ಲಿ ಕುಲ್ಯಾಳದಲ್ಲಿ ಒಂದು ಪ್ಲಾಟ ಇದೆ ಅದನ್ನು ತೆಗೆದುಕೊ ಅಂತಾ ಹೇಳಿದ್ದಳು ಅಂದರೆ ಗೊತ್ತಿಲ್ಲ. ಆ ಪ್ಲಾಟ ತೆಗೆದುಕೊಳ್ಳುವ ಸಂಬಂಧ ನಾಗಮ್ಮ **1** ನೇ ಆರೋಪಿಗೆ ರೂ. **60,000/-**ಗಳನ್ನು ನೀಡಿದ್ದಳು ಅಂದರೆ ಸರಿಯಲ್ಲ. ನಂತರ ಚಾಸಾ-**13** ಪ್ಲಾಟನ್ನು ನೋಡಿ ಇದು ಮುಳಗಡೆ ಪ್ರದೇಶದಲ್ಲಿ ಇರುವುದರಿಂದ ಅದನ್ನು ತೆಗೆದುಕೊಳ್ಳಲು ಆಗುವುದಿಲ್ಲ ಹಣವನ್ನು ವಾಪಸು ಪಡೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಮೃತ ನಾಗಮ್ಮ **1** ನೇ ಆರೋಪಿ ಹತ್ತಿರ ಹಣವನ್ನು ವಾಪಸು ಕೆಳಿದ್ದಳು ಅಂದರೆ ಸರಿಯಲ್ಲ. ಆಗ **1** ನೇ ಆರೋಪಿ ಹಣವನ್ನು ವಾಪಸು ಕೊಡುವುದಿಲ್ಲ ಬೇಕಾದರೆ ಬೇರೆ ಪ್ಲಾಟ ಕೊಡಿಸುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಮುಂದುವರೆದು ಹಣವನ್ನು ಕೇಳಿ ಕಿರಿಕಿರಿ ಮಾಡಿದರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದಳು ಅಂದರೆ ಸರಿಯಲ್ಲ. ಮುಂದೆ ನಾಗಮ್ಮ ಮತ್ತು ಚಾಸಾ-**13** ಇವರಿಗೆ ಹಣವನ್ನು ವಾಪಸ್ಸು ಕೊಡು ಅಂತಾ ಗಲಗಲಿಗೆ ಹೋಗಿ ಕೇಳಿದಾಗ ಹಣವನ್ನು ವಾಪಸ್ಸು ಕೊಡುವುದಿಲ್ಲ ನೀನು ಏನೂ ಮಾಡಿಕೋತಿ ಮಾಡಿಕೋ ಅಂತಾ ಹೇಳಿದ್ದಳು

ಅಂದರೆ ಸರಿಯಲ್ಲ. ಈ ವಿಷಯವನ್ನು ಮೃತ ನಾಗವ್ವ ತಿಳಿಸಿದ್ದಳು ಅಂದರೆ ಸರಿಯಲ್ಲ. ಆಗ ನನ್ನ ನಾಗವ್ವ ಠಾಣೆಯಲ್ಲಿ ಫಿರ್ಯಾದು ನೀಡುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ ಆಗ **1** ನೇ ಆರೋಪಿ ನೀನು ಬದುಕಿದ್ದರೆ ಫಿರ್ಯಾದು ಕೊಡುತ್ತಿಯಾ ಅಷ್ಟರೊಳಗೆ ನಿನ್ನನ್ನು ಖಲಾಸ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದ್ದಳು ಅನ್ನುವ ವಿಷಯ ನಾಗವ್ವಳಿಂದ ಗೊತ್ತಾಗಿತ್ತು ಅಂದರೆ ಸರಿಯಲ್ಲ.

**3)** ನಾನು ದಿನಾಂಕ: **30-12-2019** ರಂದು ಸಂಜೆ **6-30** ರ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದಾಗ ಚಾಸಾ-**1** ಇವರ ಮನೆಯಲ್ಲಿ ಕಿರಿಚಾಡುವ ಶಬ್ದ ಕೇಳಿತ್ತು ಅಂದರೆ ಸರಿಯಲ್ಲ. ಅಲ್ಲಿ ನಾನು ನನ್ನ ಗಂಡ ಮತ್ತು ಅಜುಬಾಜು ಮನೆಯವರು ಹೋಗಿ ನೋಡಲಾಗಿ ಚಾಸಾ-**13,** ಪ್ರತಿಕ್ಷಾ ಮತ್ತು ಚಾಸಾ-**12** ಮತ್ತು ಅಕ್ಕಪಕ್ಕದ ಮನೆಯವರು ಬಂದಿದ್ದರು ಅಂದರೆ ಸರಿಯಲ್ಲ. ನಮ್ಮನ್ನು ನೋಡಿ **1** ರಿಂದ **5** ನೇ ಆರೋಪಿತರು ಓಡಿ ಹೋದರು ಅಂದರೆ ಸರಿಯಲ್ಲ. ಒಳಗಿನಿಂದ ಚಾಸಾ-**1** ಮತ್ತು **6** ನೇ ಆರೋಪಿ ಬೆಂಕಿ ಹತ್ತಿಕೊಂಡು ಚೀರಾಡುತ್ತಾ ಹೊರಗಡೆ ಬಂದಿದ್ದರು ಅಂದರೆ ಸರಿಯಲ್ಲ. ಚಾಸಾ-**1** ಇವರಿಗೆ ಬೆಂಕಿ ಹತ್ತಿದ್ದರಿಂದ ಮೈಮೇಲೆ ಇದ್ದ ಸೀರೆ, ಜಂಪರ, ಫರಕಾರ ಸುಟ್ಟಿ ಹೋಗಿತ್ತು ಅಂದರೆ ಸರಿಯಲ್ಲ. ಮುಂದೆ ನಾವು ಎಲ್ಲರೂ ಸೇರಿ ಚಾಸಾ-**1** ಇವರನ್ನು ದುರ್ಗವ್ವನ ಗುಡಿಯ ಮುಂದೆ ಹೋಗಿದ್ದೆವು ಅಂದರೆ ಸರಿಯಲ್ಲ. **6** ನೇ ಆರೋಪಿತ ಕಾಲಿಗೆ ಸ್ವಲ್ಪ ಬೆಂಕಿ ಹತ್ತಿತ್ತು ಆತ ಓಡಿ ಹೋದ ಅಂದರೆ ಸರಿಯಲ್ಲ. ಚಾಸಾ-**1** ಇವರಿಗೆ ಎದೆಯಿಂದ ಕೆಳಗೆ, ಕೈಗೆ, ಕಾಲಿಗೆ ಸುಟ್ಟು ಗಾಯಗಳನ್ನು ಆಗಿದ್ದರು ಅವಳನ್ನು **108** ಅಂಬ್ಯುಲನ್ಸನಲ್ಲಿ ವಿಜಯಪುರದ ವೇದಾಂತ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಅಂತಾ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ನಾನು ನಾಗಮ್ಮಳನ್ನು

ವಿಚಾರಿಸಲಾಗಿ ಚಾಸಾ-12 ಚೂಡಾ ಮಾಡಲು ಬುಟ್ಟಿ ತರಲು ಹೋದಾಗ 1 ರಿಂದ 6ನೇ ಆರೋಪಿ ಒಮ್ಮೆಲೆ ಮನೆಗೆ ಬಂದರು ಬಂದು 6ನೇ ಆರೋಪಿ ನೀನು ನನ್ನ ಜೊತೆ ಬಾ ಅಂತಾ ಕರೆದಿದ್ದ ಆಗ 1 ಮತ್ತು 2ನೇ ಆರೋಪಿತರು ನೀನು ಆರೋಪಿ ನಂ. 6ರ ಜೊತೆ ಹೋಗು ಚಾಸಾ-13 ಇವರನ್ನು ಬಿಟ್ಟು ಬಿಡು ನೀನು ಪಾರ್ಟಿಗೆ ಕೊಟ್ಟ ದೊಡ್ಡನ್ನು ವಾಪಸ್ಸು ಕೊಡುತ್ತೇವೆ ಅಂದರು ಆಗ ನಾಗವ್ವ ಚಾಸಾ-13 ಇವರನ್ನು ಬಿಟ್ಟು ಬರುವುದಿಲ್ಲ ನೀವು ದುಡ್ಡು ಕೊಡದಿದ್ದರೇ ಚಾಸಾ-13 ರಿಂದ ಹೊಡಿಸುತ್ತೇನೆ ಅಂತಾ ಹೇಳಿದ್ದಳು ಆಗ ಅವರ ನಡುವೆ ಬಾಯಿ ಬಾಯಿ ನಡೆದಿತ್ತು ಆಗ 1 ಮತ್ತು 2ನೇ ಆರೋಪಿ ಈಕೆ ನಮ್ಮ ಮಾತು ಕೇಳುವುದಿಲ್ಲ ಹಾದರ ಮಾಡುವುದು ಬಿಡುವುದಿಲ್ಲ ಇಕೆಯನ್ನು ಖಲಾಸ ಮಾಡಿ ಬೀಡೋಣ ಮುಂದೆ ಯಾರು ದುಡ್ಡು ಕೇಳುವುದಿಲ್ಲ ಅಂತಾ ಹೇಳಿದಾಗ ಆಗ 3 ರಿಂದ 5ನೇ ಆರೋಪಿತರು ನಾಗವ್ವಳನ್ನು ಗಟ್ಟಿಯಾಗಿ ಹಿಡಿದಿದ್ದರು ಮತ್ತು 1 ಮತ್ತು 2ನೇ ಆರೋಪಿತರು ತಲಾ 2 ಲಿಟರ್ ಬಾಟಲಿಯಲ್ಲಿ ಇದ್ದ 4 ಲಿಟರ್ ಪೆಟ್ರೋಲನ್ನು ತನ್ನ ಮೇಲೆ ಸುರಿದಿದ್ದರು ನಂತರ ಅವರು 6ನೇ ಆರೋಪಿತನಿಗೆ ನಿನ್ನ ಜೊತೆ ಬಂದರೆ ಇವಳನ್ನು ಕರೆದುಕೊಂಡು ಬಾ ಇಲ್ಲದಿದ್ದರೆ ಬೆಂಕಿ ಹಚ್ಚಿಸುಟ್ಟು ಬಿಡು ಅಂತಾ ಹೇಳಿ ಮನೆ ಹೊರಗಡೆ ನಿಂತಿದ್ದರು, ನಂತರ 6ನೇ ಆರೋಪಿ ಕೊನೆಯ ಸಲು ಕೇಳುತ್ತೇನೆ ನೀನು ನನ್ನ ಜೊತೆ ಬಂದು ಬಿಡು ಅಂತಾ ಹೇಳಿದಾಗ ನಾಗವ್ವ ಬರುವುದಿಲ್ಲ ಅಂತಾ ಹೇಳಿದ್ದಕ್ಕೆ ಆತ ಸಿಟ್ಟು ಮಾಡಿಕೊಂಡು ತನ್ನ ಹತ್ತಿರ ಇದ್ದ ಬೆಂಕಿ ಪೊಟ್ಟಣದಿಂದ ಕಡ್ಡಿ ಗೀರಿ ಬೆಂಕಿ ಹಚ್ಚಿದ್ದ ಅದು ಆತನಿಗೂ ಕೂಡಾ ಹತ್ತಿತ್ತು. ನಾವು ಚೀರಾಡುತ್ತಾ ಹೊರಗಡೆ ಬಂದೆವು ನೀವು ಎಲ್ಲಾ ಬಂದು ನಮ್ಮ ಪ್ರಾಣ ಉಳಿಸಿದ್ದಿರಿ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಈ ಕುರಿತಂತೆ ಈಗ ಓದಿ ಹೇಳಿದಂತೆ " ನಾನು ಮೇಲಿನ ವಿಳಾಸದ ಸರಹವಾಸಿ

ಇದ್ದು_ _ _ _ _ _ _ ಕೇಳಿ ಗೊತ್ತಾಯಿತು." ಅಂತಾ ದಿನಾಂಕ: **01-01-2020** ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.-**33** ಅಂತಾ ಗುರುತಿಸಲಾಯಿತು.

**4)** ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: **12-01-2020** ರಂದು ಈಗ ಓದಿ ಹೇಳಿದಂತೆ " ನಾನು ದಿನಾಂಕ: **01-01-2020** _ _ _ _ _ _ _ _ ಕೇಳಿ ತಿಳಿದುಕೊಂಡೆನು." ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-**34** ಅಂತಾ ಗುರುತಿಸಲಾಯಿತು.

**5)** ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: **28-03-2020** ರಂದು **6** ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ " ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು." ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-**35** ಅಂತಾ ಗುರುತಿಸಲಾಯಿತು.

**6)** ನಾಗವ್ವ ಕಿಮ್ಸ್ ಹಾಸ್ಪಿಟಲನಲ್ಲಿ ದಿನಾಂಕ: **19-04-2020** ರಂದು ಮತ್ತು ಆಕೆಯ ಮಗು ದಿನಾಂಕ: **18-04-2020** ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ " ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು." ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-**36** ಅಂತಾ ಗುರುತಿಸಲಾಯಿತು.

**7)** ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: **16-06-2020** ರಂದು **3,4,5** ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ

ಓದಿ ಹೇಳಿದಂತೆ " ಈ ದಿವಸ _ _ _ _ _ _ _ _ _ ಗುರುತಿಸಿದ್ದು ಇರುತ್ತದೆ." ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-37 ಅಂತಾ ಗುರುತಿಸಲಾಯಿತು.

8) ಪೋಲಿಸರು ಘಟನಾ ಸ್ಥಳದಿಂದ ಎರಡು 2 ಲೀಟರನ ಪ್ಲಾಸ್ಟಿಕ ಬಾಟಲಗಳು ಹಾಗೂ ಒಂದು ಬೆಂಕಿ ಪೊಟ್ಟಣ, ಒಂದು ಬಿಳಿ ಗುಲಾಬಿ ಬಣ್ಣದ ಸುಟ್ಟ ಸೀರೆ, ತಿಳಿ ಕೇಸರಿ ಬಣ್ಣದ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷ ನೋಡಿ ಎಲ್ಲ ವಿಷಯ ತಿಳಿದ್ದರು ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u> ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**25/09/2023**